**ಅಸಲು ದಾವಾ ನಂ. 328/2021** **ಪಿ ಡಬ್ಲ್ಯೂ :1**

**(ಇಂದು ದಿನಾಂಕಃ 04-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ-ಪ್ರತಿವಾದಿ ಪರ ವಕೀಲರಾದ ಶ್ರೀ ಕೆ ವಿ ಆರ್ ರವರಿಂದಃ**

ಕ್ರಯಪತ್ರದಲ್ಲಿ ಹೇಳಿರುವ ಎರಡು ನಿವೇಶನಗಳಲ್ಲಿ ದಾವಾ ಸ್ವತ್ತು ಯಾವ ದಿಕ್ಕಿನಲ್ಲಿ ಇದೆ ಎಂದರೆ ಸಾಕ್ಷಿಯು ದಕ್ಷಿಣಕ್ಕೆ ಇದೆ ಎಂದು ಉತ್ತರಿಸುತ್ತಾರೆ. ಮನೆಯ ವಿಸ್ತೀರ್ಣ 25*25 ಆಗಿರುತ್ತದೆ. ನಿವೇಶನದ ವಿಸ್ತೀರ್ಣ 25*22 ಆಗಿರುತ್ತದೆ. ಮನೆ ಕಟ್ಟುವಾಗ ಸೆಟ್ ಬ್ಯಾಕ್ ಬಿಟ್ಟಿರುವುದಿಲ್ಲ. ಸದರಿ ಮನೆಯಲ್ಲಿ ಎರಡು ಕೊಠಡಿಗಳು ಇರುತ್ತದೆ. ನಾನು ಸದರಿ ಮನೆಗೆ ಹೋಗಿರುತ್ತೇನೆ. ಸದರಿ ಮನೆಯ ಬಾಗಿಲು ಪೂರ್ವ ದಿಕ್ಕಿಗೆ ಇರುತ್ತದೆ. ನಿಪಿ-3 ರಲ್ಲಿ ಖಾತಾ ನಂಃ 190 ರಲ್ಲಿ ಎರಡು ನಿವೇಶನ ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಾನು ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಖಾತಾ ನಂಃ 190 ರ ತೆರಿಗೆ ನಿರ್ಧಾರಣಾ ಬೇಡಿಕೆ ವಹಿಯನ್ನು ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಖಾತಾ ನಂಃ 190 ರಲ್ಲಿ 12*12 ಒಂದೇ ನಿವೇಶನ ಇದೆ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-3 ದಾವಾ ದಾಖಲು ಮಾಡುವ ಮೊದಲು ನನಗೆ ಬೇಕಾದ ರೀತಿಯಲ್ಲಿ ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವ 22*25 ಅಳತೆಯ ನಿವೇಶನ ಪಂಚಾಯ್ತಿಯಲ್ಲಿ ಈ ಮೊದಲು ಖಾತೆ ಆಗಿಲ್ಲ ಎಂದರೆ

ಸರಿಯಲ್ಲ. ಮನೆ 2010 ರಲ್ಲಿ ಬಾಡಿಗೆಗೆ ಕೊಟ್ಟಿರುತ್ತಾರೆ, ಯಾವ ತಿಂಗಳು ಎಂದು ಹೇಳಲು ಆಗುವುದಿಲ್ಲ. ಬಾಡಿಗೆ ಕೊಟ್ಟ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಅವರು ಬಾಡಿಗೆ ಕೊಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆಗೆ ಕೊಡುತ್ತಿದ್ದರು ಎಂದು ಉತ್ತರಿಸುತ್ತಾರೆ.

ನಾನು ಇದೇ ರೀತಿ ಪ್ರತಿವಾದಿಯ ಸಹೋದರನ ವಿರುದ್ಧ ಅದಾ ನಂಃ 327/2021 ರಂತೆ ದಾಖಲು ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾವಾದ ಮನೆಯ ವಿಸ್ತೀರ್ಣ 12*12 ಆಗಿರುತ್ತದೆ. ಆ ದಾವಾದ ಮನೆಯ ದಕ್ಷಿಣ ದಿಕ್ಕಿಗೆ ಪ್ರತಿವಾದಿಗಳ ಮನೆ ಇರುತ್ತದೆ. ದಾವಾ ಸ್ವತ್ತಿನ ಹತ್ತಿರ ಪ್ರತಿವಾದಿಗಳಿಗೆ ಸೇರಿದ ಒಂದು ಮನೆ ಇರುತ್ತದೆ. ಪ್ರತಿವಾದಿಗಳಿಗೆ ಸೇರಿದ ಮನೆ ಈ ದಾವಾ ಸ್ವತ್ತಿನ ಉತ್ತರಕ್ಕೆ ಬರುತ್ತದೆ. ಸದರಿ ಮನೆ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ.

ದಾವಾ ಮನೆ 2ನೇ ಪ್ರತಿವಾದಿಯ ಹೆಸರಿಗೆ ಇರುವ ಮನೆ ಮತ್ತು ಅದರ ಖಾತಾ ನಂಃ 635 ಎಂದರೆ ಸಾಕ್ಷಿಯು ಆ ಮನೆ ಉಳಿಕೆ ಜಾಗದಲ್ಲಿ ಇದೆ ಎಂದು ಉತ್ತರಿಸುತ್ತಾರೆ. ಆ ಸ್ಥಳದಲ್ಲಿ 2ನೇ ಪ್ರತಿವಾದಿಯ ಮನೆ ಬಿಟ್ಟು ನಾನು ಹೇಳಿದ ಹಾಗೆ ದಾವಾ ಮನೆ ಇಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಮನೆ 2010-11 ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು ಸರ್ಕಾರದ ಸಹಾಯಧನ ಮತ್ತು ಸಾಲ ಪಡೆದು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಉಳಿಕೆ ಜಾಗದಲ್ಲಿ ಅವರು ಕಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಮನೆಯನ್ನು ಅಡಮಾನ ಇಟ್ಟು ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ 1ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದ್ದ ನಿವೇಶನದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ.

ಪ್ರತಿವಾದಿಯ ತಂದೆ ಯಾವ ಉದ್ದೇಶಕ್ಕಾಗಿ ಕ್ರಯಪತ್ರ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಆಗ 10 ವರ್ಷದವನಿದ್ದೆ ಎಂದು ಉತ್ತರಿಸುತ್ತಾರೆ. ನಾನು ವಯಸ್ಕನಾದ ನಂತರ ಅದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ. ನಾನು ಹಾಜರುಪಡಿಸಿದ ಕ್ರಯಪತ್ರದ ಪ್ರಕಾರ 1ನೇ ಪ್ರತಿವಾದಿಯ ತಂದೆ ನಿವೇಶನ ನನಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ಮಾರಾಟ ಮಾಡುವಂತಹ ಉದ್ದೇಶ 1ನೇ ಪ್ರತಿವಾದಿಯ ತಂದೆಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ 1ನೇ ಪ್ರತಿವಾದಿಯ ತಂದೆ ಕ್ರಯಪತ್ರ ಮಾಡಿದಾಗ ಅದರ ಹಣವನ್ನು ಮನೆಗೋಸ್ಕರ ವಿನಿಯೋಗಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಕ್ರಯಪತ್ರ ಆಗಿರುವುದು ಪ್ರತಿವಾದಿಗಳಿಗಾಗಲೀ ಅವರ ತಂದೆಗಾಗಲೀ ತಿಳಿದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಅವರನ್ನು ನೋಡಿರುವುದಿಲ್ಲ. ಪ್ರತಿವಾದಿಗಳ ತಂದೆ ಮಧ್ಯವ್ಯಸನಿಯಾಗಿದ್ದು ಅದನ್ನು ದುರುಪಯೋಗಪಡಿಸಿಕೊಂಡು ನನ್ನ ತಂದೆ ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರ ಆದ ದಿನದಿಂದ ನಾನಾಗಲೀ ನನ್ನ ತಂದೆಯಾಗಲೀ ಇಲ್ಲಿಯವರೆವಿಗೂ ದಾವಾ ಸ್ವತ್ತಿಗೆ ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಪ್ರಕಾರ ಖಾತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೋಸದಿಂದ ಕ್ರಯಪತ್ರ ಮಾಡಿದ್ದರಿಂದ ಅವರು ಜೀವಂತ ಇದ್ದಾಗ ದಾವಾ ಸ್ವತ್ತಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ.

ನಾನು ಈಗ ನನ್ನ ತಂದೆ ತೀರಿಕೊಂಡ ನಂತರ ಅಧಿಕಾರಿಗಳೊಂದಿಗೆ ಶಾಮೀಲಾಗಿ ಹಳೇ ದಾಖಲೆಗಳನ್ನು ತೆಗೆದು ಖಾತಾ ಬದಲಾಯಿಸಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಹೇಳಿದ ಹಾಗೆ ದಾವಾ ನಿವೇಶನದಲ್ಲಿ ನಮಗೆ ಸೇರಿದ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳು ಮನೆ ಕಟ್ಟಿ ವಾಸ ಮಾಡುತ್ತಿದ್ದು ನನಗೆ ದಾವಾ ಹೂಡಲು ಕಾನೂನಿನಲ್ಲಿ ಅವಕಾಶ ಇಲ್ಲದ ಕಾರಣ ಪ್ರತಿವಾದಿಗಳು ಕಟ್ಟಿದ ಮನೆಯನ್ನು ನನ್ನ ಮನೆಯೆಂದು ಸುಳ್ಳು ಹೇಳಿ ದಾವಾ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತಾ ನಂಃ 168 ಆಗಿರುತ್ತದೆ. ದಾವಾ ಆಸ್ತಿಯ ಖಾತೆ ಈಗ ನನ್ನ ಮತ್ತು ನನ್ನ ತಮ್ಮಂದಿರ ಹೆಸರಿನಲ್ಲಿ ಇರುತ್ತದೆ. ಈ ರೀತಿ ನನ್ನ ತಂದೆ ಮರಣ ಹೊಂದಿದ ನಂತರ ಮಾಡಿರುತ್ತೇವೆ. ಅದಕ್ಕೂ ಮೊದಲು ಖಾತಾ ನನ್ನ ತಂದೆಯ ಹೆಸರಿನಲ್ಲಿ ಇತ್ತು. ನಾನು ಹೇಳಿದ ಹಾಗೆ ಖಾತೆ ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ದಾವಾ ಅಸ್ತಿಯಲ್ಲಿ ನನಗೆ ಸೇರಿದ ಮನೆ ಅಥವಾ ನಿವೇಶನ ಇಲ್ಲ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ, ಮನೆ ಇದೆ ಎಂದು ಸುಳ್ಳು ಹೇಳಿ ದಾಖಲೆಗಳನ್ನು ಸೃಷ್ಟಿ ಮಾಡಿ ಈ ದಾವಾ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವತ್ತೂ ನಮ್ಮ ಬಾಡಿಗೆದಾರರಾಗಿರಲಿಲ್ಲ ಮತ್ತು ಯಾವತ್ತೂ ಬಾಡಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವರಿಗೆ ಸೇರಿದ ನಿವೇಶನದಲ್ಲಿ ಹೊಸದಾಗಿ ಮನೆ ಕಟ್ಟಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-- ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**